## ಕಳೆದ ಸಂಚಿಕೆಯಲ್ಲಿ



ಕಡಲನ್ನು ಹುಡುಕಿಕೊಂಡು ಬಂದ ಸುಮಿಗೆ, ಕಡಲ ಜೊತೆಗೆ ಕಡಲತೀರದಲ್ಲಿ ಯಾರೋ ಕಿನ್ನರನನ್ನು ತನಗರಿವಿಲ್ಲದಂತೆಯೇ ಹುಡುಕಿಕೊಂಡು ಬಂದಂತೆ ಅನ್ನಿಸತೊಡಗಿತು. ಎದೆಯ ಮೇಲಿದ್ದ ದುಪ್ಪಟ್ಟಾ ಗಾಳಿಯಲ್ಲಿ ಹಾರಿ ಪಾತಿದೋಣಿಯ ಹುಡುಗನ ಮೈಯನ್ನು ಆವರಿಸಿತು. ಹಾಗೆ ಹಾರಿಬಂದ ದುಪ್ಪಟ್ಟಾ ಏನೆಲ್ಲ ಕಥೆಗಳನ್ನು ಹೃದಯದಿಂದ ಹೃದಯಕ್ಕೆ ದಾಟಿಸಿತೋ ಯಾರಿಗೆ ಗೊತ್ತು. ಪ್ರೀತಂಗೆ ಮೊದಲ ಬಾರಿಗೆ ಹೃದಯದೊಳಗೆ ಯಾವುದೋ ಹೊಸ ಭಾವವೊಂದು ಮಿಡಿಯುತ್ತಿರುವುದರ ಅನುಭವ. ಮಗನ ಅನ್ಯಮನಸ್ಕತೆಯನ್ನು ಗುಲಾಬಿಯೂ ಗಮನಿಸಿದಳು. ಆಕೆಯ ಪಾಲಿಗೆ ಮಗನೇ ಸರ್ವಸ್ವ. ಗಂಡನನ್ನು ಬಲಿ ತೆಗೆದುಕೊಂಡಿದ್ದ ಕಡಲಿಗೆ ಮಗನನ್ನು ಇಳಿಸುವುದಿಲ್ಲವೆಂದು ಸಂಕಲ್ಪ ಮಾಡಿದ್ದ ಗುಲಾಬಿ, ಕಾಳಿ ನದಿಯಲ್ಲಿ ಪಾತಿ ದೋಣಿಯಲ್ಲಿ ಮೀನು ಹಿಡಿಯಲಷ್ಟೇ ಮಗನಿಗೆ ಅವಕಾಶ ಕಲ್ಪಿಸಿದ್ದಳು. ಮೀನು ಮಾರಾಟದಿಂದ ಬಂದ ಕಾಸನ್ನು ಜತನ ಮಾಡುತ್ತಿದ್ದಳು. ಅಮ್ಮ–ಪಾತಿದೋಣಿ ಹಾಗೂ ಕಾಲೇಜಿನ ನಡುವೆ ಬದುಕುತ್ತಿದ್ದ ಪ್ರೀತಂನ ಬದುಕಿನಲ್ಲಿ ಸುಮಿ ಬದಲಾವಣೆ ತಂದಳು. ಹುಡುಗನ ಜಾವೆಲಿನ್ ಆಟಕ್ಕೆ ಹೊಸ ಗುರಿಯೊಂದು ದೊರೆಯಿತು.

ಮಾತಿನ ಚಕಮಕಿ ಆದದ್ದು ನಿಜ. 'ಅವಳು ನಮ್ಮ ಗಲ್ಲಿಯ ತಾನಗುಬ್ಬಿ, ಐ ಲವ್ ಹರ್... ನೀ ಏನಾದ್ರೂ ಕ್ರಾಸ್ ಬಂದ್ಯೋ, ಸಿಕ್ಸರ್ ಬಾರ್ಸಿದಂಗೆ ಗ್ರೌಂಡಾಚೆ ಅಟ್ಟುವೆ, ಮಗನೇ!' ಎಂದಿದ್ದ. ರೋಹಿತನ ಧಮಕಿಗೆ ಹೆದರಿರಲಿಲ್ಲ. ಆದರೆ ಸುಮಿ ಬೇರೊಬ್ಬನನ್ನು ಪ್ರೀತಿಸ್ತಾಳೆ ಅನ್ನುವುದನ್ನು ಅರಗಿಸಿಕೊಳ್ಳುವುದು ಪ್ರೀತಂನಿಗೆ ಕಷ್ಟವಾಗಿತ್ತು. ಆದರೆ ಸುಮಿನೂ ನಿನ್ನ ಲವ್ ಮಾಡ್ತಾಳೇನೊ ಎಂದು ನಾನ್ಯಾಕೆ ಕೇಳಲಿಲ್ಲ? ಶ್ಯೆ, ಅದು ನನ್ನ ತಲಿಗೇಕೆ ಹೊಳಿಲಿಲ್ಲ? ನಾಳೆ ಸುಮಿಯನ್ನೇ ಮೀಟ್ ಮಾಡಿ ಕ್ಲಿಯರ್ ಮಾಡಿಕೊಳ್ಳಲಾ?

ಕ್ಲಿಯರ್ ಮಾಡಿಕೊಳ್ಳಬೇಕು ಎಂಬ ತೀರ್ಮಾನದೊಂದಿಗೆ ಮರುದಿನ ಹುಡುಗ ಹುಡುಗಿ ಪರಸ್ಪರ ಹುಡುಕಾಡುತ್ತಾ ಕಡಲ ತೀರದಲ್ಲಿ ಅಲೆದಾಡಿದರು, ಮೊದಲ ಬಾರಿಗೆ ಕಡಲ ಪರಿವೆಯಿಲ್ಲದೇ! ಆದರೆ ಮನಸ್ಸುಗಳು ಪರಸ್ಪರ ಪ್ರದಕ್ಷಿಣೆಯಲ್ಲಿದ್ದರೂ ಚಲಿಸುವ ಪಥ ವಿರುದ್ಧ ದಿಕ್ಕಿನಲ್ಲಿತ್ತು. ಇಬ್ಬರೂ ಹಿಂದೆ ಮುಂದೆ ಸುತ್ತಾಡಿದರೂ ಎದುರಾಬದುರಾ ಆಗಲಿಲ್ಲ.

'ಕಡಲಿಗಿಳಿಯದ ದಿನ ಕಡಲ ಮಕ್ಕಳದು ಅರೆಹೊಟ್ಟೆಯೇ' ಎಂದಿದ್ದ ಪ್ರೀತಂ. ಸೇತುವೆ ಕೆಳಗಿನ ರಸ್ತೆಯಿಂದ ನೇರವಾಗಿ ಕಾಳಿ ನದಿಗೆ ಹೋದರೆ ಕತೆ ಬೇರೆಯಾಗುತ್ತಿತ್ತೇನೋ. ಆದರೆ ಸುಮಿ ಬೀಚ್ ಮೇಲೆ ನಡೆಯುತ್ತಾ ಕಾಳಿ ಅಳಿವೆ ತಲುಪಿದ್ದಳು. ಸುಮಿ ಕಾಳಿ ಸಂಗಮ ತಲುಪಿದಾಗ ಪಾತಿದೋಣಿಯೇನೋ ದಡದಲ್ಲಿತ್ತು. ಪ್ರೀತಂ ಕಾಣಲಿಲ್ಲ. 'ಎಲ್ಲಿ, ಹೋದ ನಿನ್ ಸವಾರ?' ಎಂದು ದೋಣಿಯನ್ನು ನೇವರಿಸಿದಳು. ಈಗ ಬರ್ತಾನೆ, ಆಗ ಬರ್ತಾನೆ ಅಂತ ಕಾದಳು. ಎಷ್ಟು ಹೊತ್ತಾದರೂ ಪ್ರೀತಂನ ಸುಳಿವು ಇಲ್ಲದಿದ್ದಾಗ ಇದ್ದಿಲಿನಂಥದ್ದೇನೋ ಎತ್ತಿಕೊಂಡು ಪಾತಿದೋಣಿ ಮೇಲೆ ತನ್ನ ಮೊಬೈಲ್ ನಂಬರ್ ಗೀಚಿದಳು.

'ಒಂದಿನ ಕಡಲನ್ನು ಕಾಣದಿದ್ರೂ ಕನಸಿಗೆ ಖೋತಾ ಆಗ್ತೈತಿ' ಎಂದಿದ್ದಳು ಸುಮಿ. ಹುಡುಗಿಯನ್ನು ಹುಡುಕುತ್ತ ಪ್ರೀತಂ ಟಾಗೋರ್ ಬೀಚ್ ಮೇಲೆ ಅಡ್ಡಾಡುತಿದ್ದ. ಬೀಚು, ಪಾರ್ಕು, ಪಾನಿಪುರಿ ಅಂಗಡಿಗಳನೆಲ್ಲಾ ಸುತ್ತಾಡಿ ನಿರಾಸೆಯಿಂದ ರಂಗಮಂದಿರದ ಮೆಟ್ಟಿಲುಗಳ ಮೇಲೆ ಕೂತ. ಅವಳು ಸ್ಕೂಟಿ ಮೇಲೆ ಬರೋದು ಗೊತ್ತಿದ್ದರೂ ಅದನ್ನು ನೋಡಿರಲಿಲ್ಲ. ಮಿಂಚಿನಂತೆ ಏನೋ ಹೊಳೆದು ಟು ವ್ಹೀಲರ್ ಸ್ಟ್ಯಾಂಡಿಗೆ ಹೋಗಿ ಬೈಕುಗಳ ನಂಬರ್ ಪ್ಲೇಟುಗಳನ್ನೆಲ್ಲಾ ಗಮನಿಸುತ್ತಾ ಹೋದ. ಸ್ಕೂಟಿ ಗುಲ್ಬರ್ಗಾದೇ ಆಗಿದ್ದರೆ, ಅದರ ನಂಬರ್ ಪ್ಲೇಟ್ ಬೇರೆನೆ ಆಗಿರಬೇಕು ಎನ್ನುವುದು ಅವನ ಅಂದಾಜು. ಅದು ಹುಸಿಯಾಗಲಿಲ್ಲ. ಅಲ್ಲೊಂದು ನಂಬರ್ ಪ್ಲೇಟ್ ಕೆಎ–32ರಿಂದ ಶುರುವಾಗಿತ್ತು. ಖುಶಿಯಾಯ್ತು ಅವನಿಗೆ. ಈ ಸ್ಕೂಟಿ ಸುಮಿಯದೇ ಎನ್ನುವುದು ಖಾತ್ರಿಯಾಯ್ತು. ಆದರೆ ಎಲ್ಲಿ ಹೋದಳು? ಬೀಚ್ ಮೇಲೆ ಇಲ್ಲಾ ಅಂದರೆ, ಅವಳು ಕಾಳಿನದಿ ಕಡೆ ನಡೆದು ಹೋಗಿರಬಹುದೇ? ಅವಸರದಿಂದ ತನ್ನ ಸೈಕಲ್ ತೆಗೆದು ಸುಂಯ್ಯಂತ ಅತ್ತ ಹೊರಟೇಬಿಟ್ಟ. ಹೊರಡುವುದಕ್ಕಿಂತ ಮುಂಚೆ ಸ್ಕೂಟಿಯ ಮಿರರ್ ಮೇಲೆ ಮೊಬೈಲ್ ನಂಬರ್ ಗೀಚುವುದನ್ನು ಮಾತ್ರ ಮರೆಯಲಿಲ್ಲ.

ಹುಡುಗ ಹುಡುಗಿಯರ ಮುಲಾಕಾತನ್ನು ನೋಡಲಾಗದೇ ಮುಸ್ಸಂಜೆ ಸೂರ್ಯ ನಿಧಾನಿಸಿ ನಿಧಾನಿಸಿ ಕಡಲಿಗಿಳಿದು ಹೋದ. ಪರಸ್ಪರ ದರ್ಶನ ಸಂಭವಿಸದಿದ್ದರೂ ಪ್ರೀತಂ ಮತ್ತು ಸುಮಿಯರಿಬ್ಬರ ಹೃದಯಗಳಿಗೆ ಈಗ ಮೊಬೈಲ್ ಧ್ವನಿಯಾಗಿತ್ತು! ಪ್ರೇಮಿಗಳು ಮೌನದಲ್ಲೂ ಸಂಭಾಷಿಸಬಲ್ಲರು ಎಂದು ಶೈಲತ್ತೆ ಹೇಳಿದ್ದು ನಿಜವಾದರೂ ಸುಮಿಗೆ ಈಗ ಮಾತಿನ ಜರೂರತ್ತು ಇತ್ತು.

ಮಿತಭಾಷಿಯಾದರೂ ಈ ಸಮಯದಲ್ಲಿ ಪ್ರೀತಂನಿಗೂ ಮಾತು ಬೇಕಾಗಿತ್ತು. 'ರಾಶಿ ಮಿಸ್ ಮಾಡ್ಕಂಡೆ' ಅಂದ. 'ನಿನ್ ಮ್ಯಾಲೆ ಕಡಲಿನಷ್ಟು ಪ್ರೀತಿಯಾಗಿದೆ, ಪ್ರೀತ್' ಎಂದಳು. ಅವರ ಮಾತು–ನಗು ದಣಿವರಿಯದೆ ಭೋರ್ಗರೆಯಿತು. ನೂರಾರು ಸಂದೇಶಗಳು ವಿನಿಮಯಗೊಂಡು ಕತ್ತಲರಾತ್ರಿಯಲ್ಲಿ ಮಿಂಚುವ ಬಳ್ಳಿಗಳಾದವು. ಎಲ್ಲಾ ಕ್ಲಿಯರ್ ಮಾಡಿಕೊಳ್ಳಬೇಕು ಎಂದುಕೊಂಡಿದ್ದ ಇಬ್ಬರ ಹೃದಯದಲ್ಲೂ ಈಗ ಪ್ರೇಮವು ಕ್ರಿಸ್ಟಲ್ ಕ್ಲಿಯರ್ ಆಗಿ ಹೊಳೆಯುತ್ತಿತ್ತು!

***

ಸುಮಿ ಪ್ರೀತಂನ ಜೊತೆಗೆ ಸುತ್ತಾಡುವಾಗ ಹೊಸತೇ ಆದ ಕಾರವಾರವನ್ನು ಕಂಡಳು. ಪ್ರೀತಂಗೂ ಹಾಗೇ! ಪ್ರೀತಂ ಹುಟ್ಟಿ ಬೆಳೆದದ್ದು ಕಾರವಾರದಲ್ಲೇ ಆದರೂ, ಪುಣ್ಯಾತ್ಮ ಕೆಲವೊಂದು ಜಾಗಗಳನ್ನು ನೋಡಿರಲೇ ಇಲ್ಲ. ಇಬ್ಬರೂ ಸೈಕಲ್ಲಿನಲ್ಲಿ ಸುತ್ತಿದ್ದೇ ಸುತ್ತಿದ್ದು. ಇಬ್ಬರ ಕ್ಲಾಸುಗಳೂ ಮಧ್ಯಾಹ್ನ ಒಂದೇ ಟೈಮಿಗೆ ಮುಗಿಯುತ್ತಿದ್ದದ್ದು ಅವರಿಗೆ ಹೀಗೆ ಅಲೆದಾಡಲು ಅನುಕೂಲವಾಗಿತ್ತು. ಕಾರವಾರದ ಗಲ್ಲಿ ಗಲ್ಲಿಗಳು, ರಸ್ತೆ ಒಳರಸ್ತೆಗಳು, ಬೀಚು, ಪಾರ್ಕು, ಬಂದರು, ಮಾರುತಿ ಮಂದಿರ, ಚರ್ಚು, ಕೋಡಿಭಾಗ, ಸಂಕ್ರುಭಾಗ, ಕಡವಾಡ, ನಂದನಗದ್ದಾ, ಶಿರವಾಡ ಎಲ್ಲವನ್ನೂ ಇನ್ನೊಮ್ಮೆ ಮತ್ತೊಮ್ಮೆ ಸುತ್ತಾಡಿದರು. ಸದಾಶಿವಗಡದಲ್ಲಿರುವ ಸೂಫಿಸಂತನ ದರ್ಗಾ, ಶಿವಾಜಿ ಕೋಟೆಗೆ ಹೋದಾಗ ಐತಿಹಾಸಿಕ ಸಂಗತಿಗಳನ್ನು ವಿವರಿಸಿದಳು. 'ನಮ್ಮೂರ ಬಗ್ಗೆ ನನಗೇ ಇದೆಲ್ಲ ಗೊತ್ತಿರಲಿಲ್ಲ ಮಾರಾಯ್ತಿ' ಅಂದ ಪ್ರೀತಂ.

ಹುಡುಗ ಹುಡುಗಿಯರು ಜೊತೆಜೊತೆಯಲ್ಲಿ ಅಡ್ಡಾಡಿದರೂ, ಸಾರ್ವಜನಿಕ ಶಿಷ್ಟಾಚಾರ ಕಾದುಕೊಂಡಿದ್ದರೆ ಅದನ್ನು ಮನ್ನಿಸುವಷ್ಟು ಉದಾರತನ ಕಾರವಾರಿಗರಲ್ಲಿತ್ತು. ಹೀಗಾಗಿ ಇವರ ಅಲೆದಾಟಕ್ಕೂ ಅನ್ಯೋನ್ಯತೆಗೂ ಅನುರಾಗಕ್ಕೂ ಯಾವುದೇ ಭಂಗ ಬರಲಿಲ್ಲ. ಪ್ರೀತಂ ಅವಳಿಗೆ ಖಾಂದಾ ಭಜ್ಜಿ, ಬಂನ್ಸ್ ಭಾಜಿ, ವಡಾ ಪಾವ್, ಭೇಲ್ ಪುರಿ ಸೆಂಟರ್‌ಗಳನ್ನು ಕಾಣಿಸಿದ. ಬಗೆಬಗೆ ತಿನಿಸುಗಳ ರುಚಿ ಸ್ವಾದವನ್ನು ಮನಸಾರೆ ಸವಿಯುವ ಸುಮಿಯನ್ನು ನೋಡುವುದೇ ಪ್ರೀತಂನ ಕಣ್ಣುಗಳಿಗೆ ಹಬ್ಬವಾಯಿತು. ತಿನಿಸುಗಳ ಫ್ಲೇವರುಗಳನ್ನು, ಅವಕ್ಕೆ ಬಳಸಿದ ಸಾಮಗ್ರಿಗಳ ಪ್ರಮಾಣವನ್ನು ತೂಗಿ ಹೇಳಬಲ್ಲ ಅವಳ ಜ್ಞಾನ ಪ್ರೀತಂನನ್ನು ಚಕಿತಗೊಳಿಸಿತ್ತು. ತನ್ನ ಆಯಿ ಅದ್ಭುತವಾಗಿ ಮಾಡುವ ಕೋಳಿ ಸಾರಿನಂಥ ಪದಾರ್ಥಗಳಿಗೂ ಬರೀ 'ಲೈಕಾಗಿದ ಆಯಿ, ಹಾಂ' ಎಂಬುದನ್ನು ಬಿಟ್ಟು ಬೇರೇನನ್ನೂ ಹೇಳಲಾಗದ ತನ್ನ ಶಬ್ದ ದಾರಿದ್ರ್ಯಕ್ಕೆ ತನ್ನನ್ನೆ ಹಳಿದುಕೊಂಡ. ಆಯಿ ಮಾಡುವ ಮೀನುಪಳದಿ, ರವಾ ಫ್ರೈ, ಶೆಟ್ಲೆಪುಡಿ, ಬಸಳೆಸೊಪ್ಪಿನ ಹುಳ್ಳ... ಇತ್ಯಾದಿ ಅಡುಗೆಗಳ ರುಚಿಯ ಗುಣಗಾನವನ್ನೂ ಸುಮಿಯ ಬಾಯಿಂದ ಒಮ್ಮೆ ಕೇಳುವಂತಾದರೆ, ಆಯಿಗೂ ಕೇಳಿಸುವಂತಾದರೆ ಎಷ್ಟು ಮಸ್ತ್ ಆಗುತ್ತಿತ್ತು! ಆದರೆ ಈ ಹುಡುಗಿ ಪ್ಯೂರ್ ವೆಜಿಟೇರಿಯನ್ ಮಾರಾಯಾ, ಶೈ!

'ನೀವು ಗಡೀಗಡೀ ಶೈ ಅಂಬುದು ಎಂತಕೆ ಮಾರಾಯ್ರೆ?' ಎಂದು ಸುಮಿ ಪ್ರೀತಂನನ್ನು ಅಣಕಿಸಿದಳು. 'ನಿಮ್ಗೆ ಕಾರವಾರಿ ಭಾಷಾ ಬಂತು ತಗೋರಿ' ಎಂದು ಪ್ರೀತಂನೂ ಅಣಕಿಸಿದ. ಸುಮಿ